ಸರೋಜಿನಿ ಮಹಿಷಿ ವರದಿ

೫೯೧ (೫೭೭) ಶ್ರೀ ಬಿ. ಎಂ. ಇದಿನಬ್ಬ (ಉಳ್ಳಾಲ).—ಮಾನ್ಯ ಮುಖ್ಯ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯೆಯಿಟ್ಟು ಉತ್ತರಿಸುವರೇ:—

ಅ) ಸರೋಜಿನಿ ಮಹಿಷಿ ವರದಿ ಸರಕಾರಕ್ಕೆ ಬಂದಿದೆಯ:ಲ್ಲವೇ ?

ಆ) ಸದ್ರಿ ವರದಿಯ ಜ್ಯಾರಿಗಾಗಿ ರಾಜ್ಯದ ಎಲ್ಲಾ ಕಡೆಗಳಿಂದ ಮನವಿಗಳು ಬರುತ್ತಿದೆಯಲ್ಲವೇ ?

ಇ) ಹಾಗಿರುವಾಗ ಸದ್ರಿ ವರದಿಯನ್ನು ಜ್ಯಾರಿಗೊಳಿಸಲು ಸರಕಾರ ಬದ್ಧವಾಗಿದೆಯೇ ?

ಈ) ಈ ವರದಿಯ ಜ್ಯಾರಿ ಯಾವಾಗ ಪ್ರಾರಂಭವಾಗುವುದು ? ಇದು ಪ್ರಾಮುಖ್ಯವೆಂದು ಸರಕಾರ ಪರಿಗಣಿಸಿದೆಯಲ್ಲವೇ ?

ಶ್ರೀ ಎಸ್. ಆರ್. ಬೊಮ್ಮಾಯಿ (ಮುಖ್ಯ ಮಂತ್ರಿಗಳು).—

ಅ) ಹೌದು

ಆ) ಹೌದು.

ಇ) ಈ ವರದಿಯಲ್ಲಿರುವ ಶಿಫಾರಸುಗಳನ್ನು ಜಾರಿಗೊಳಿಸುವ ಕ್ರಮದ ಮೇಲ್ವಿಚಾರಣೆ ಗೋಸ್ಕರ ಮತ್ತು ಆ ಶಿಫಾರಸುಗಳಿಂದ ಉದ್ಭವಿಸಬಹುದಾದ ಇತರ ಅಂಶಗಳನ್ನು ಪರಿಶೀಲಿಸುವುದಕ್ಕೋಸ್ಕರ ಸರ್ಕಾರವು ಡಾ॥ ವಿ. ವೆಂಕಟೇಶ್, ಸಂಸತ್ ಸದಸ್ಯರು ಇವರ ಅಧ್ಯಕ್ಷತೆಯಲ್ಲಿ ಒಂದು ಸಮಿತಿಯನ್ನು ರಚಿಸಿದೆ. ಈ ಸಮಿತಿಯು ದಿನಾಂಕ

ಈ) ೧೮-೫-೮೮ರಂದು ಕಾರ್ಯ ಆರಂಭಿಸಿದೆ. ಈ ಸಮಿತಿಯು ಎರಡು ಮಧ್ಯಂತರ ವರದಿಗಳನ್ನು ನೀಡಿದ್ದು ಈ ವರದಿಗಳಲ್ಲಿನ ಶಿಫಾರಸ್ಸುಗಳನ್ನು ಸರ್ಕಾರ ತತ್ವಶಃ ಒಪ್ಪಿಕೊಂಡಿದ್ದು ಸೂಕ್ತ ಕ್ರಮ ಕೈಗೊಳ್ಳಲಾಗುತ್ತಿದೆ.

ಡಾ॥ ಸರೋಜಿನಿ ಮಹಿಷಿ ಸಮಿತಿಯ ವರದಿಯು ಪ್ರಾಮುಖ್ಯವೆಂದು ಸರಕಾರ ಪರಿಗಣಿಸಿದೆ. ದಕ್ಷಿಣ ಕನ್ನಡ ಜಿಲ್ಲೆಯ ಭೂ ಮಸೂದೆ ಅಪಿಲೇಟ.

೫೯೨ (೫೭೮) ಶ್ರೀ ಬಿ. ಎಂ. ಇದಿನಬ್ಬ (ಉಳ್ಳಾಲ).—ಮಾನ್ಯ ಕಂದಾಯ ಮಂತ್ರಿಯವರು ಈ ಕೆಳಕಂಡ ಪ್ರಶ್ನೆಗಳಿಗೆ ದಯೆಯಿಟ್ಟು ಉತ್ತರಿಸುವರೇ:—

ಅ) ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಭೂಮಸೂದೆಯ ಜಿಲ್ಲಾ ಅಪಿಲೇಟನ್ನು ಯಾವಾಗ ನೇಮಕ ಮಾಡಲಾಯಿತು ?

ಆ) ಇಲ್ಲಿ ೧೯೮೮ನೇ ಅಕ್ಟೋಬರುವರೆಗೆ ತೀರ್ಮಾನಕ್ಕಾಗಿ ಬಂದ ಪ್ರಕರಣಗಳು ಎಷ್ಟು ? ಅವುಗಳಲ್ಲಿ ಎಷ್ಟು ತೀರ್ಮಾನವಾಗಿದೆ ? ಹಾಗೂ ಎಷ್ಟು ಬಾಕಿ ಇವೆ ?

ಶ್ರೀ ಎಸ್. ಆರ್. ಬೊಮ್ಮಾಯಿ (ಕಂದಾಯ ಮಂತ್ರಿಗಳು).—

ಅ) ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ೪ ಭೂ ಸುಧಾರಣಾ ಮೇಲ್ಮನವಿ ಪ್ರಾಧಿಕಾರಗಳಿದ್ದು ಅವುಗಳಲ್ಲಿ ಮಂಗಳೂರಿನ ಜಿಲ್ಲಾ ಭೂ ಸುಧಾರಣಾ ಮೇಲ್ಮನವಿ ಪ್ರಾಧಿಕಾರವನ್ನು ದಿನಾಂಕ ೨೭ನೇ ಡಿಸೆಂಬರ್ ೧೯೮೫ ರಂದು ಹಾಗೂ ಪುತ್ತೂರು, ಉಡುಪಿ ಮತ್ತು ಕುಂದಾಪುರಗಳಲ್ಲಿ ದಿನಾಂಕ ೨೧-೧೦-೧೯೮೬ರಂದು ಅಧಿಕ ಭೂ ಸುಧಾರಣಾ ಅಭಿವೃದ್ಧಿ ಪ್ರಾಧಿಕಾರಗಳನ್ನು ಸ್ಥಾಪನೆ ಮಾಡಲಾಯಿತು.

ಪ್ರಾಧಿಕಾರ	ತೀರ್ಮಾನಕ್ಕಾಗಿ ಬಂದ ಪ್ರಕರಣಗಳು	ಇತ್ಯರ್ಥ ವಾದವು	೧-೧-೮೯ ರಿಂದ ಬಾಕಿ
ಮಂಗಳೂರು	೧೭೭೦	೩೯೪	೧೩೭೬
ಪುತ್ತೂರು	೧೫೯೧	೨೧೬	೧೩೭೫
ಉಡುಪಿ	೧೮೨೭	೨೩೫	೧೫೯೨
ಕುಂದಾಪುರ	೧೫೪೦	–	೧೫೪೦
ದ. ಕ. ಜಿಲ್ಲೆ	೬೭೨೮	೮೪೫	೫೮೮೩

ಉಳ್ಳಾಲ ಚರ್ಮತ್ತೂರು ರಸ್ತೆಯ ಅಭಿವೃದ್ಧಿ

೩೯೩ (೫೭೬) ಶ್ರೀ ಬಿ. ಎಂ. ಇದಿನಬ್ಬ (ಉಳ್ಳಾಲ) ಮಾನ್ಯ ಲೋಕೋಪಯೋಗಿ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ:—

ಅ) ಉಳ್ಳಾಲ ಕಡವಿನ ಬಾಗಿಲಿನಿಂದ ಒಬತ್ತು ಕೆರೆಗಾಗಿ ಹೋಗುವ ಉಳ್ಳಾಲ ಚರ್ಮತ್ತೂರು ರಸ್ತೆ ಇನ್ನೂ ದುರಸ್ತಿ ಹಾಗೂ ಡಾಮರು ಇಲ್ಲದೆ ಇರುವುದು ಸರಕಾರದವರ ಗಮನಕ್ಕೆ ಬಂದಿದೆಯೇ ?

ಆ) ಈ ಪ್ರಮುಖ್ಯ ರಸ್ತೆಯ ಎರಡೂವರೆ ಕಿಲೋ ಮೀಟರ್ ರಸ್ತೆಯನ್ನು ದುರಸ್ತಿ ಮಾಡಿ ಯಾವಾಗ ಡಾಮರು ಹಾಕಲಾಗುವುದು ?

ಇ) ಈ ಹೆದ್ದಾರಿ ರಸ್ತೆಯ ಡಾಮರ್ ಹಾಕುವ ಕೆಲಸವನ್ನು ಶೀಘ್ರವೇ ಕೈಗೆತ್ತಿಕೊಳ್ಳಲಾಗುವುದೇ ?

ಶ್ರೀ ಕೆ. ಎಂ. ಕೃಷ್ಣಾ ರೆಡ್ಡಿ (ಲೋಕೋಪಯೋಗಿ ಮಂತ್ರಿಯವರು). —

ಅ) ಈ ರಸ್ತೆಯು ೬.೦೦ನೇ ಕಿ.ಮಿ. ನಿಂದ ೮.೮೦ನೇ ಕಿ.ಮಿ ವರೆಗೆ ದುರಸ್ತಿ ಮತ್ತು ಡಾಂಬರು ಸಮೀಕರಣ ಆಗಿಲ್ಲದಿರುವುದು ಸರ್ಕಾರದ ಗಮನಕ್ಕೆ ಬಂದಿದೆ.

ಆ ಮತ್ತು ಇ

ಈ ರಸ್ತೆಯ ಅಭಿವೃದ್ಧಿ ಹಾಗೂ ಡಾಂಬರು ಕೆಲಸವನ್ನು ೪.೦೦ ಲಕ್ಷ ರೂಗಳ ಅಂದಾಜಿನಲ್ಲಿ ೧೯೮೯-೯೦ನೇ ಸಾಲಿನ ಆಯವ್ಯಯದಲ್ಲಿ ಸೇರಿಸಲಾಗಿದೆ. ಇದಕ್ಕೆ ರೂ. ೦.೪೦ ಲಕ್ಷ ಅನುದಾನ ಕೊಡಲಾಗಿದೆ ಶೀಘ್ರದಲ್ಲಿ ಕಾಮಗಾರಿಯನ್ನು ಕೈಗೆತ್ತಿಕೊಳ್ಳಲಾಗುವುದು.

ಕುಂದರಗಿ ಏತ ನೀರಾವರಿ ಯೋಜನೆ

೩೯೪ (೫೭೨) ಶ್ರೀ ಎಂ. ಎಲ್. ಮುತ್ತಣ್ಣವರ್ (ಗೋಕಾಕ್). — ಮಾನ್ಯ ಲೋಕೋಪಯೋಗಿ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ:—

ಅ) ಕುಂದರಗಿ ಏತ ನೀರಾವರಿ ಯೋಜನೆಯನ್ನು ಯಾವಾಗ ಕೈಗೆತ್ತಿಕೊಳ್ಳಲಾಗುವುದು ?

ಆ) ಇದರ ಅಂದಾಜು ನೆಚ್ಚ ಎಷ್ಟು ಹಾಗೂ ಸರ್ವೆ ಮಾಡಲಾಗಿದೆಯೆ? (ಸಮೀಕ್ಷೆ)

ಇ) ಇದರಿಂದ ನೀರಾವರಿಯಾಗುವ ಕ್ಷೇತ್ರ ಎಷ್ಟು?

ಶ್ರೀ ಎಸ್. ಆರ್. ಬೊಮ್ಮಾಯಿ (ಮುಖ್ಯಮಂತ್ರಿಗಳು). —

ಅ) ಕೃಷ್ಣಾ ಜಲಾನಯನ ಏತ ನೀರಾವರಿ ನಿಗಮ ನಿಯಮಿತದ ವಾರ್ಷಿಕ ಕಾರ್ಯಕ್ರಮದಲ್ಲಿ ಸೇರಿಸಿ ಆರ್ಥಿಕ ಸಂಸ್ಥೆಯ ನೆರವು ದೊರೆತ ನಂತರ ಕೈಗೆತ್ತಿಕೊಳ್ಳಲಾಗುವುದು.

ಆ) ಸಮೀಕ್ಷೆ ಮಾಡಲಾಗಿದೆ. ಅಂದಾಜು ನೆಚ್ಚ ೫.೬೪ ಲಕ್ಷ ರೂಪಾಯಿಗಳು.

ಇ) ೧೧೫ ಹೆಕ್ಟೇರುಗಳು.